ಇರುವುದರಿಂದ ಈ ಸಮಸ್ಯೆ ಉದ್ಭವಿಸಿದೆ. ಈ ಕೆಲಸವನ್ನು ಕೂಡಲೇ ಮಾಡದೇ ಇರುವಲ್ಲಿ ನಮ್ಮ ಕ್ಷೇತ್ರ ಬರಗಾಲಕ್ಕೆ ಈಡಾಗುವುದರಲ್ಲಿ ಸಂಶಯವಿಲ್ಲ. 1984ರಲ್ಲಿ ಆಗಿನ ಮುಖ್ಯಮಂತ್ರಿಗಳು ಈ ಕೆಲಸವನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸುತ್ತೇವೆಂದು ಮಾತು ಕೊಟ್ಟಿದ್ದರು. ಆದರೆ ಇದುವರೆಗೂ ಇದನ್ನು ಪ್ರಾರಂಭ ಮಾಡಿರುವುದಿಲ್ಲ. ಈಗಲಾದರೂ ನಮ್ಮ ಸರ್ಕಾರ ಬಂದಿರುತ್ತದೆ. ಆದುದರಿಂದ ನಾನು ಸರ್ಕಾರದಲ್ಲಿ ನನ್ನ ಜನತೆಯ ಪರವಾಗಿ ಇದನ್ನು ಪ್ರಾರಂಭ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ನನ್ನ ಮೊಳಕಾಲ್ಮೂರು ಕ್ಷೇತ್ರ ಕಸಬಾ ಹೋಬಳಿ ಮತ್ತು ಚಳ್ಳಕೆರೆ ತಾಲ್ಲೂಕು ತಳಕು ಹೋಬಳಿ ಸುಮಾರು 20 ಕೆರೆಗಳಿಗೆ ನೀರು ಪೂರೈಸಲು ಸದರಿ ತಾಲ್ಲೂಕುಗಳ ಸರಹದ್ದಿನಲ್ಲಿ ಹರಿಯುವ ಜಿನಿಗಿ ಹಳ್ಳಕ್ಕೆ ಚಳ್ಳಕೆರೆ ತಾಲ್ಲೂಕು ಹಬ್ಬೇನಳ್ಳಿ ಗ್ರಾಮದ ಹತ್ತಿರ ಬ್ಯಾರೇಜ್ ಮತ್ತು ಪೂರಕ ನಾಲೆಗಳನ್ನು ನಿರ್ಮಿಸಬೇಕು. ಇದರಿಂದ ಪದೇಪದೇ ಬರಗಾಲಕ್ಕೆ ತುತ್ತಾಗುವ ಸುಮಾರು 30ಹಳ್ಳಿಗಳು ಪ್ರಯೋಜನ ಪಡೆಯುತ್ತವೆ. ಈ ಯೋಜನೆಗೆ ಅಂದಾಜು 1.5 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇದರಿಂದ ಈ ಪ್ರದೇಶದಲ್ಲಿ ಅಂತರ್ಜಲ ಹೆಚ್ಚಿ ಈಗಾಗಲೇ ದುಸ್ಥಿತಿಯಲ್ಲಿರುವ ಸುಮಾರು 60 ಸಾವಿರ ಜನರಿಗೆ ಪ್ರಯೋಜನವಾಗುತ್ತದೆ. ಆದಕಾರಣ ಸರ್ಕಾರದವರು ನನ್ನ ಕ್ಷೇತ್ರದ ಬಡರೈತರ ಬವಣೆಯನ್ನು ಪರಿಗಣಿಸಿ ಅದಷ್ಟು ಬೇಗ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ಬಹಳ ಕಳಕಳಿಯಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ(ಸಣ್ಣ ನೀರಾವರಿ ರಾಜ್ಯ ಮಂತ್ರಿ) : ಮಾನ್ಯ ಉಪಾಧ್ಯಕ್ಷಿಣಿಯವರೇ ಈ ಬಗ್ಗೆ ನನ್ನ ಹೇಳಿಕೆಯನ್ನು ಓದುತ್ತೇನೆ. ಅಪ್ಪರ್ ಭದ್ರಾ ಯೋಜನೆಯು ಇನ್ನೂ ತನಿಖಾ ಹಂತದಲ್ಲಿದೆ. ಈ ಯೋಜನೆಯ ತಾಂತ್ರಿಕ ಹಾಗೂ ಆರ್ಥಿಕ ಶಕ್ಯತೆಗಳನ್ನು ಪರಿಶೀಲಿಸಿದ ಮೇಲೆ, ಇದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳ ಸರಹದ್ದಿನಲ್ಲಿ ಹರಿಯುವ ಜಿನಗಿ ಹಳ್ಳಕ್ಕೆ ತಾಲ್ಲೂಕು ಹಬ್ಬೇನಹಳ್ಳಿ ಗ್ರಾಮದ ಹತ್ತಿರ ಬ್ಯಾರೇಜು ಮತ್ತು ಪೂರಕ ಕಾಲುವೆಗಳನ್ನು ನಿರ್ಮಿಸುವ ಯೋಜನೆಯ ಬಗ್ಗೆ ಯಾವುದೇ ಪ್ರಸ್ತಾಪನೆ ಇದುವರೆವಿಗೂ ಇರುವುದಿಲ್ಲ. ಹಾಗೂ ಈ ಯೋಜನೆಯ ಬಗ್ಗೆ ವಿವರವಾದ ಅನ್ವೇಷಣೆ ನಡೆಸಿರುವುದಿಲ್ಲ. ಈ ಅನ್ವೇಷಣೆಯ ಕಾರ್ಯ ಈಗ ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಯು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಸಾಧುವೆಂದು ಕಂಡುಬಂದಿಲ್ಲ, ಇದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

9) ಬೈಂದೂರು ಬಳಿಯ ಗಂಗನಾಡು ಕಾಯಿದಿರಿಸಿದ ಅರಣ್ಯದ ಆನೆಗಳ ಹಾವಳಿ

ಶ್ರೀ ಜಿ.ಎಸ್. ಆಚಾರ್. (ಬೈಂದೂರು) : ಮಾನ್ಯ ಅಧ್ಯಕ್ಷಿಣಿಯವರೇ, ದಕ್ಷಿಣ ಕನ್ನಡ ಬೈಂದೂರು ಬಳಿಯ ಗಂಗನಾಡು ಇಲ್ಲಿರುವುದು ಕಾದಿಟ್ಟ ದಟ್ಟ ಕಾಡು. ಕಾಡಿನ ಬಿಳಿಯ ದೇವಪ್ಪನಡಿಯಲ್ಲಿ, ತಿಮ್ಮನ ಮಗ ಮೂಲ್ತು ಎಂಬುವರ ಹೊಲದಲ್ಲಿ, ಕಳೆದ ತಿಂಗಳು ಹದಿನಾಲ್ಕರ ದಟ್ಟಿರುಳು ಕಾಡಾನೆ ಹಾವಾಳಿ. ಸುಗ್ಗಿ ಬೆಳೆಯ ಗದ್ದೆಗೆ ನುಗ್ಗಿ ಸರ್ವನಾಶ. ತೆಂಗಿನ ಗಿಡಗಳೆಲ್ಲ ತುಂಡುತುಂಡು. ಬಾಳೆಯ ತೋಟ ಬುಡಮೇಲು, ಈ ದಾಳಿಯಿಂದಾದ ಹಾನಿ ಸುಮಾರು ಐದು ಸಾವಿರ ರೂಪಾಯಿಗೂ ಅಧಿಕ. ನಷ್ಟದಿಂದ ನೊಂದಿರುವ, ಕಷ್ಟದಿಂದ ಕೆಂಗೆಟ್ಟಿರುವ ದಲಿತ ಮೂಲ್ತುವಿನ ದೀನ ಮೊರೆ ಸರಕಾರಕ್ಕೆ - ಸರಕಾರಿ ಕಾಡಿನ ಆನೆ ಮಾಡಿದ ಹಾನಿ ತುಂಬಿಸಿ ಕೊಡಲು ಸಾಕಷ್ಟು ಪರಿಹಾರ ನೀಡಲಿಕ್ಕೆ ಕಾಡಾನೆಯಿಂದ ರಕ್ಷಿಸಲ್ಪಡಲಿಕ್ಕೆ ಪರಿಸರದ ಇನ್ನಿತರರಿಗೂ

ತೊಂದರೆ ಆಗದಿರಲಿಕ್ಕೆ ತಿಂಗಳೊಂದಾದರೂ ಪರಿಹಾರ ಬಂದಿಲ್ಲ. ಅರಣ್ಯದ ಆನೆಯ ಆಟಾಟೋಪ ನಿಂತಿಲ್ಲ. ಮೂಲ್ತುವಿನ ಮೊರಗೆ ಇಲಾಖೆಯ ಮನಕರಗಿಲ್ಲ. ಹೀಗಾಗಿ ಸದನದ ಮೂಲಕ ನನ್ನ ಮನವಿ, ತುರ್ತು ನೆರವಿಗಾಗಿ. ಈ ಮನವಿಯೂ ಅರಣ್ಯ ರೋಧನವಾಗದಂತೆ ಮಾನ್ಯ ಅರಣ್ಯ ಸಚಿವರು ನೋಡುವರೇ? ಪರಿಹಾರ ನೀಡುವರೆ?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯಅರಣ್ಯ ಸಚಿವರ ಗಮನಕ್ಕೆ ಈ ವಿಷಯವನ್ನು ತಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳಿಸಿಕೊಡಲಾಗುವುದು.

MADAM DEPUTY SPEAKER : Now the House stands adjourned to meet again at 2:55 p.m.

(The House adjourned at 1:58p.m.to meet again at 2:55 p.m)

(ಸಭೆಯು ಪುನಃ 3.35ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು : ಈಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಸೂದೆಯು ಪ್ರತಿಗಳು ಇನ್ನೂ ಬಾರದಿರುವುದರಿಂದ ಅದನ್ನು ನಾಳೆತೆಗೆದುಕೊಳ್ಳೋಣ. ಈಗ ಮಾನ್ಯ ಬಸವಲಿಂಗಪ್ಪನವರು ತಮ್ಮ.....

ಶಾಸನರಚನಾ ಕಾರ್ಯಕಲಾಪಗಳು

ಕರ್ನಾಟಕ ಜಿಲ್ಲಾಪರಿಷತ್ ಮಂಡಲ್ ಪಂಚಾಯತ್ ಮತ್ತು ನ್ಯಾಯಪಂಚಾಯತಿಯ (ತಿದ್ದುಪಡಿ) ವಿಧೇಯಕ 1990.

SRI D.B. CHANDRE GOWDA : Madam Deputy Speaker,I have a small technical objection.

ನಾವು ಬಜೆಟ್ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಈಗ ಇದನ್ನು ತೆಗೆದುಕೊಂಡರೆ ಬಿಎಸಿಯಲ್ಲಿ ತೀರ್ಮಾನವಾದಂತೆ 2-3 ದಿವಸ ಇದರ ಮೇಲೆ ಚರ್ಚೆ ಆಗಬೇಕಾಗುತ್ತದೆ.

That is the agenda fixed by the Business Advisory Committee.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಬಿಲ್ಲನ್ನು ಪಾಸ್ ಮಾಡಬೇಕೆಂದರೆ ಎರಡು ಮೂರು ದಿವಸಗಳು ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೆ ಸಮಯ ಬೇಕ್ಕಾಗುತ್ತದೆ. ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಇಂದು ಅಪ್ರೊಪ್ರಿಯೇಷನ್ ಬಿಲ್ಲನ್ನು ಪಾಸ್ ಮಾಡಬೇಕೆಂದು ತೀರ್ಮಾನ ಮಾಡಲಾಗಿದೆ. ನಾವಿನ್ನೂ ಬಜೆಟ್ ಭಾಷಣವನ್ನು ಇನ್ಸಿಯೇಟ್ ಮಾಡುವುದಕ್ಕೆ ಆಗಿಲ್ಲ. ಅದರ ಮಧ್ಯದಲ್ಲಿ ಕಾಂಟ್ರವರ್ಸಿ ಬಿಲ್ಲನ್ನು ತೆಗೆದುಕೊಂಡು ಬಂದರೆ, ನಾವು ಬಜೆಟ್ ಪಾಸ್ ಮಾಡಬೇಕೋ ಬೇಡವೊ?

ಶ್ರೀ ವಾಟಾಳ್‌ನಾಗರಾಜ್ : ಯಾರಿಗೂ ಬೇಡವಾದ ತಬ್ಬಲಿ ಮಗುವನ್ನು ತಾವು ಏತಕ್ಕೆ ಮೈಮೇಲೆ ಹಾಕಿಕೊಳ್ಳುತ್ತಿದ್ದೀರಿ?

ಉಪಾಧ್ಯಕ್ಷರು : ಯಾರಿಗೂ ಬೇಡವಾದ್ದು ಸದನದಲ್ಲೇ ಇರಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಬಿಸಿನೆಸ್ ಅಡ್ವೈಜರಿ ಕಮಿಟಿಯ ತೀರ್ಮಾನಕ್ಕೆ ಈ ಸದನದಲ್ಲಿ ಏನಾದರೂ ಮಾನ್ಯತೆ ಇದೆಯೋ ಇಲ್ಲವೋ? ಮಾನ್ಯತೆ ಇದ್ದರೆ ಅದರಂತೆ ನಾವು ಹೋಗೋಣ. I am asking a simple question. Whether we shoulld abide by the decision of the Business Advisory committee or not?